ಕರ್ನಾಟಕ ರಾಜ್ಯ ಹಣ ವಿನಿಯೋಗ ವಿಧೇಯಕ 1983

ಪರಿಶೀಲನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್ : (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು) ಅಧ್ಯಕ್ಷರೇ ಈ ಕೆಳಗೆ ಕಂಡ ಪ್ರಸ್ತಾವವನ್ನು ಸೂಚಿಸುತ್ತೇನೆ.

(ಕರ್ನಾಟಕ ರಾಜ್ಯ ಹಣ ವಿನಿಯೋಗ ವಿಧೇಯಕ 1983ನ್ನು ಸಭೆ ಪರಿಶೀಲಿಸುವುದು,)

ಪ್ರಸ್ತಾವವನ್ನು ಸಭೆಯ ಮುಂದಿಡಲಾಯಿತು.

ಅಧ್ಯಕ್ಷರು : ಈಗ ಪ್ರಸ್ತಾವವೇನೆಂದರೆ—ಕರ್ನಾಟಕ ರಾಜ್ಯ ಹಣವಿನಿಯೋಗ ವಿಧೇಯಕ 1983 ನ್ನು ಪರಿಶೀಲಿಸುವುದು. ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು.

ಖಂಡಗಳ ಪರಿಶೀಲನೆ

ಅಧ್ಯಕ್ಷರು : ಈಗ ವಿಧೇಯಕವನ್ನು ಖಂಡ ಖಂಡವಾಗಿ ಮತಕ್ಕೆ ಹಾಕುತ್ತೇನೆ ಪ್ರಸ್ತಾವವೇನೆಂದರೆ

2 ಮತ್ತು 3ನೇ ಖಂಡಗಳು

ಎರಡನೇ ಮತ್ತು ಮೂರನೇ ಖಂಡಗಳು ಹಾಗೂ ಅನುಸೂಚಿ, ವಿಧೇಯಕದ ಅಂಗಗಳು ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು.

(2ನೇ, 3ನೇ ಖಂಡ ಹಾಗೂ ಅನುಸೂಚಿ ವಿಧೇಯಕಕ್ಕೆ ಸೇರಿಸಲ್ಪಟ್ಟವು.

ಮೊದಲನೆಯ ಖಂಡ. ಹೆಸರು ಮತ್ತು ಅವತರಣಿಕೆ.

ಅಧ್ಯಕ್ಷರು : ಪ್ರಸ್ತಾವವೇನೆಂದರೆ :

ಮೊದಲನೆಯ ಖಂಡ ಹೆಸರು ಮತ್ತು ಅವತರಣಿಕೆಗಳು ವಿದೇಯಕದ ಅಂಗಗಳು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕಕ್ಕೆ ಸೇರಿಸಸಲ್ಪಟ್ಟವು.)

ಅನುಮೋದನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್ : ಅಧ್ಯಕ್ಷರೇ, ಕರ್ನಾಟಕ ಹಣ ವಿನಿಯೋಗಕ್ಕೆ 1983 ವಿಧೇಯಕವನ್ನು ಅನುಮೋದಿಸುವುದು.

ಉಪಾಧ್ಯಕ್ಷರು : ಪ್ರಸ್ತಾವವೇನೆಂದರೆ.

ಕರ್ನಾಟಕ ರಾಜ್ಯ ಹಣ ವಿನಿಯೋಗ 1983 ವಿಧೇಯಕವನ್ನು ಅನುಮೋದಿಸುವುದು. ಪ್ರಸ್ತಾವವು ಅಂಗೀಕೃತವಾಯಿತು ಮತ್ತು ಅನುಮೋದನೆ ನೀಡಲಾಯಿತು.

THE KARNATAKA APPROPRIATION (VOTE ON ACCOUNT) BILL, 1983

Motion to Consider

Sri A. LAKSHMISAGAR (Minister for Law and Parliamentary Affairs) : Sir, I beg to move :

" That the Karnataka Appropriation (Vote on Account) Bill, 1983 be taken into consideration."

The question was proposed.

ಶ್ರೀ ಎಂ. ವೀರಪ್ಪಮೊಯ್ಲಿ :—(ವಿರೋಧ ಪಕ್ಷದ ನಾಯಕರು) :—ಸನ್ಮಾನ್ಯ ಸಭಾಧ್ಯಕ್ಷರೇ, ಈ ಸಂದರ್ಭದಲ್ಲಿ ನಾನು ಕೆಲವು ವಿಚಾರಗಳನ್ನು ಮಾತ್ರ ಪ್ರಸ್ತಾಪ ಮಾಡಬಯಸುತ್ತೇನೆ. ಈಗಾಗಲೇ 20 ನಿಮಿಷಕಾಲ ತಡವಾಗಿದೆ. ಆದ್ದರಿಂದ ನಾನು ಪೆಚ್ಚಿನ ವಿವರಗಳಿಗೆ ಹೋಗುವುದಿಲ್ಲ.

ಮೊದಲನೆಯದಾಗಿ ಹೇಳುವುದಾದರೆ, ಇವರು 6 ತಿಂಗಳ ಕಾಲಕ್ಕೆ ಲೇಖಾನುದಾನವನ್ನು ಕೋರಿದ್ದಾರೆ. ಇವರು ತಮ್ಮ ಬಜೆಟ್ ಭಾಷಣದ ಪುಸ್ತಕದ 40ನೇ ಪುಟದಲ್ಲಿ "ಇಡೀ ವರ್ಷದ ವೆಚ್ಚದ ಬೇಡಿಕೆಗಳ ಮೇಲೆ ವಿವರವಾದ ಚರ್ಚೆ ನಡೆಯಲು ಸಾಕಷ್ಟು ಕಾಲಾವಕಾಶ ಒದಗಿಸುವ ದೃಷ್ಟಿಯಿಂದ 1983-84ರ ಮೊದಲ 6 ತಿಂಗಳ ವೆಚ್ಚದ ಬಗ್ಗೆ ಲೇಖಾನುದಾನವನ್ನು ಕೋರುತ್ತೇನೆ" ಎಂದು ಹೇಳಿದ್ದಾರೆ. ಸಾಮಾನ್ಯವಾಗಿ ನಾವು ಹಿಂದೆ ಕೇವಲ 4 ತಿಂಗಳಕಾಲಕ್ಕೆ ಮಾತ್ರ ಲೇಖಾನುದಾನವನ್ನು ಕೇಳುತ್ತಿದ್ದುದು ಮಾನ್ಯ ಲಕ್ಷ್ಮೀಸಾಗರ್‌ರವರಿಗೂ ಮತ್ತು ಮಾನ್ಯ ಬೊಮ್ಮಾಯಿಯವರಿಗೂ ಗೊತ್ತಿದೆ. ಮೊದಲನೆಯದಾಗಿ ಹೇಳುವುದಾದರೆ ಈ ಲೇಖಾನುದಾನದ ಪದ್ಧತಿಯೇ ಸರಿಯಲ್ಲ ಎಂದು ಮಾನ್ಯ ಜೆ. ಹೆಚ್. ಪಟೇಲ್‌ರವರೇ ಪ್ರಸ್ತಾಪ ಮಾಡುತ್ತಿದ್ದರು. ಎರಡನೆಯದಾಗಿ.....

ಶ್ರೀ ಜೆ. ಹೆಚ್. ಪಟೇಲ್—ಸಾಮಾನ್ಯವಾಗಿ ಅಲ್ಲ. ಚುನಾವಣೆ ಆದ ಮೊದಲನೇ ವರ್ಷದಲ್ಲಿ ಮಾತ್ರ.....